SRI MALLIKARJUNA KHARGE.— Sir, I visited all those three villages on 4th instant. I had also tried to contact the Deputy Commissioner in this connection. When I contacted the Deputy Commissioner he told me that he had already visted those places. That is why I have asked the Hon'ble Minister to tell me the exact date of visit to those villages That was not given in the statement just now read by the Hon'ble Minister.

SRI M. MALLAPPA.—According to the information available with me the Deputy Commissioner has visited the spot. The information relating the exact date of visit is not available.

MR. SPEAKER.—Please find out and inform the hon. Member.

Matter under rule 312

re : Non ovailability of buses from Bangalore to Shimoga.

† ಶ್ರೀ ಸಿ.ಎಂ. ಇಬ್ರಾಹಿಂ (ಶಿವಾಜಿನಗರ).—ಸನ್‌ಮಾನ್ಯ ಸಭಾಪತಿಗಳೇ ರೂಲ್ ನಂ. ೩೧೨ರ ಕೆಳಗೆ ನಮ್ಮ ಕರ್ನಾಟಕ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನತೆ ಪ್ರಯಾಣ ಮಾಡಲು ಬಸ್‌ಗಳಿಗಾಗಿ ಪಡುತ್ತಿರುವಂಥ ತೊಂದರೆಗಳನ್ನು ಹೇಳತೀರದಾಗಿರುತ್ತದೆ. ಮೊನ್ನೆ ಮೂರುದಿವಸಗಳ ಹಿಂದೆ ನಾನು ಕಣ್ಣಾರೆ ಕಂಡಂಥ ಒಂದು ನಿದರ್ಶನವನ್ನು ಹೇಳುತ್ತೇನೆ. ನಮ್ಮ ಊರು ಭದ್ರಾವತಿ, ಭದ್ರಾವತಿಯಿಂದ ಬೆಂಗಳೂರಿಗೆ ಬರಬೇಕಾದರೆ ದಾರಿಯುದ್ದಕ್ಕೂ ಒಂದೊಂದು ಊರಿನ ಬಸ್ ನಿಂತು ಕೊಳ್ಳುವಂಥ ಜಾಗದಲ್ಲಿ ೨೫-೩೦ ಜನರು ತಂಡತಂಡವಾಗಿ ನಿಂತು ಬಸ್ಸಿಗಾಗಿ ಕಾಯುತ್ತಿರುವುದನ್ನು ನೋಡಿದೆ. ಒಂದು ಇನ್‌ಸಿಡೆಂಟ್ ನಡೆದದ್ದನ್ನು ಹೇಳುವುದಾದರೆ ತರೀಕೆರೆಯಿಂದ ಬಿಟ್ಟು ಮೂರು ಮೈಲಿ ದೂರದಲ್ಲಿ ಒಂದು ಮದುವೆ ಪಾರ್ಟಿಯವರು ಬಸ್‌ಗಾಗಿ ದಾರಿಯಲ್ಲಿ ಕಾಯುತ್ತಿರಬೇಕಾದರೆ ಬಸ್ ಬಂತು. ಆ ಬಸ್‌ನಲ್ಲಿ ಸೀಟು ದೊರೆಯದೆ ಮೊದಲು ಮದುವೆ ಹೆಣ್ಣನ್ನು ಕಳುಹಿಸಿಬಿಟ್ಟರು. ಆನಂತರ ಬಸ್‌ಗೆ ಕಾದು ಬಸ್ ಸಿಗದೆ ಮದುವೆ ಗಂಡಿನ ಕಡೆಯವರು ಮೂಹೂರ್ತ ಕಳೆದುಹೋಗುತ್ತದಲ್ಲ ಎಂದು ಪರಿತಪಿಸುತ್ತಿರಬೇಕಾದರೆ ನನ್ನ ಕಾರನ್ನು ಕೊಟ್ಟು ಕಳುಹಿಸಬೇಕಾದ ಸಂದರ್ಭವು ಒದಗಿತು. ನನ್ನ ಕಾರಿನಲ್ಲಿ ಸುಮಾರು ಮೂರುಬಾರಿ ಹೋಗಿ ಬರಬೇಕಾದ ಪ್ರಸಂಗ ಬಂದಿತ್ತು. ಒಂದು ಬಸ್‌ನಲ್ಲಿ ಒಂದು ಬಾರಿಗೆ ೧೨೦-೧೫೦ ಜನರನ್ನು ತುಂಬಿಕೊಂಡು ಹೋಗತಕ್ಕಂಥ ಪರಿಸ್ಥಿತಿ ಬಂದಿರುವುದಕ್ಕೆ ಮೊದಲನೆಯದಾಗಿ ಆಗಿರತಕ್ಕಂಥ ತೊಂದರೆ ಏನೆಂದರೆ ಒಂದು ಸಮರ್ಥನೀಯವಾದ ಪ್ಲಾನಿಂಗ್ ಇಲ್ಲದೆ ಇರತಕ್ಕಂಥಾದ್ದು. ಹಿಂದೆ ಇರತಕ್ಕಂಥ ಜನಸಂಖ್ಯೆಗಿಂತಲೂ ಈಗಿನ ಜನಸಂಖ್ಯೆಯೂ ಹೆಚ್ಚಿರುವುದರಿಂದ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಿ ಬಸ್‌ಗಳ ಸಂಖ್ಯೆಯನ್ನು ಜಾಸ್ತಿಮಾಡಬೇಕು. ಇದಕ್ಕೆ ಒಂದು ವ್ಯವಸ್ಥಿತವಾದ ಯೋಜನೆಯನ್ನು ಹಾಕಿಕೊಳ್ಳಬೇಕು. ಯುದ್ಧಕಾಲೇ ಕಸ್ತ್ಯಾಭ್ಯಾಸವೆಂದು ಹೇಳುವ ಹಾಗೆ ಯುದ್ಧ ಬಂದಾಗ ತಕ್ಷಣ ಶಸ್ತ್ರಾಭ್ಯಾಸವನ್ನು ಮಾಡತಕ್ಕಂಥದ್ದು ಸರಿಯಲ್ಲ. ಬೆಂಗಳೂರು ನಗರದಿಂದ ಸುಮಾರು ಪ್ರತಿನಿತ್ಯವೂ ೪೦ ಸಾವಿರಕ್ಕಿಂತಲೂ ಹೆಚ್ಚು ಜನರು ಗ್ರಾಮಾಂತರ ಪ್ರದೇಶಗಳಿಗೆ ಪ್ರಯಾಣ ಮಾಡುವವರಿರುತ್ತಾರೆ. ಈವತ್ತು ಸರ್ಕಾರಕ್ಕೆ ಏನಾದರೂ ಕೆಟ್ಟ ಹೆಸರು ಬರುತ್ತದೆ ಎಂದರೆ ಈ ಬಸ್‌ಗಳ ಒಂದು ಅವ್ಯವಸ್ಥೆಯಿಂದಲೇ ಎಂದು ಹೇಳಬಹುದು. ಹೆಚ್ಚಿಗೆ ಪಾಲಿಟಿಕ್ಸ್ ಮಾತನಾಡತಕ್ಕಂಥಾದ್ದು ಈ ಬಸ್‌ಗಳಲ್ಲಿಯೇ. ಸಾವಿರಾರು ಜನರು ಶಾಪಹಾಕುತಿದ್ದಾರೆ ಸರ್ಕಾರಕ್ಕೂ ಮತ್ತು ತಾಪಕರಿಗು. ಆದ್ದರಿಂದ ತಮಗೆ ಹೇಳುತ್ತಿದ್ದೇನೆ ಜನರ ಶಾಪಕ್ಕೆ ಗುರಿಯಾಗುವುದಕ್ಕೆ ಬಡಲಾಗಿ. ತೊಂದರೆಗಳನ್ನು ತಪ್ಪಿಸುವುದಕ್ಕೆ ಏನಾದರೂ ಒಂದು ಪ್ರಯತ್ನವನ್ನು ಮಾಡಬೇಕು. ಈ ಬಸ್‌ಗಳ ತೊಂದರೆಗಾಗಿಯೇ ಎಷ್ಟೋ ಮದುವೆಗಳನ್ನು ಮುಂದೂಡಿರುವುದು ಇರುತ್ತದೆ. ಹಳ್ಳಿಗಳಲ್ಲಿ ಇರತಕ್ಕಂಥ ಜನರಿಗೆ ಕಾಂಟ್ರಾಕ್ಟ್ ಬಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಶಕ್ತಿ ಇರುವುದಿಲ್ಲ. ೨೫-೩೦ ಜನ ಒಟ್ಟಿಗೆ ಪ್ರಯಾಣ ಮಾಡಬೇಕೆಂದರೆ ಬಹಳ ತೊಂದರೆ ಇರುತ್ತದೆ. ೧೦ನೇ ತಾರೀಖು ಒಂದು ಊರನ್ನು

ಸೇರಬೇಕೆಂದಿದ್ದರೆ ೨ನೇ ತಾರೀಖಿನಿಂದಲೇ ಒಬ್ಬೊಬ್ಬರು, ಇಬ್ಬಿಬ್ಬರು ಪ್ರಯಾಣವನ್ನು ಮಾಡಬೇಕು. ಈ ರೀತಿಯ ಒಂದು ಕಂಡೀಶನ್ ಇರುತ್ತದೆ ಈಪತ್ತು ಮಾನ್ಯ ಮಂತ್ರಿಗಳನ್ನು ಒಂದು ಪ್ರಶ್ನೆ ಕೇಳುತ್ತೇನೆ, ಅದೇನೆಂದರೆ ಇಲಾಖೆಯ ಬಸ್‌ಗಳಲ್ಲಿ ಇರತಕ್ಕಂಥ ಕಂಡಕ್ಟರ್ ಡ್ರೈವರ್‌ಗಳು ನಡೆದು ಕೊಳ್ಳತಕ್ಕಂಥ ನಡತೆಯು ಕೂಡ ಸರಿಯಾದ ರೀತಿಯಲ್ಲಿ ಇರುವುದಿಲ್ಲ. ಹಳ್ಳಿಗಳಲ್ಲಿರತಕ್ಕಂಥ ಜನರು ಗಲೀಜು ಬಟ್ಟೆಗಳನ್ನು, ಹರಕಲು ಬಟ್ಟೆಗಳನ್ನು ತೊಟ್ಟುಕೊಂಡು ಬರತಕ್ಕಂಥ ಸಂದರ್ಭಗಳೇ ಜಾಸ್ತಿ, ಅವರು ಬಸ್‌ಗಳನ್ನು ಹತ್ತಬೇಕಾದರೆ ಕತ್ತಿಗೆ ಕೈಪಾಕ ದಬ್ಬುವಂಥ ಕೃತ್ಯಗಳನ್ನು ಮಾಡುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳನ್ನು ಈ ಕೊರತೆಯನ್ನು ತಪ್ಪಿಸುವುದಕ್ಕೆ ಏನಾದರೂ ಪ್ರಯತ್ನವನ್ನು ಮಾಡಬೇಕಂ. ಬಹುಶಃ ನಿಮಗೆ ಛಾಪಿಗಳು ಇಲ್ಲದೆ ತೊಂದರೆ ಇರಬಹುದು. ಇದಕ್ಕೆ ಏನಾದರೂ ಪರಿಹಾರವನ್ನು ಕಂಡುಕೊಳ್ಳಬೇಕು. ಮದುವೆ ಸೀಸನ್ ಇನ್ನು ೨-೩ ತಿಂಗಳು ಇರುತ್ತದೆ. ಇನ್ನೇನು ಆಷಾಡಮಾಸ ಬರುತ್ತಿದೆ, ಬಹುಶಃ ಈ ಆಷಾಡಮಾಸದಲ್ಲಿ ನಮ್ಮವರು ಯಾರು ಮದುವೆಯನ್ನು ಮಾಡುವುದಿಲ್ಲ. ನಮ್ಮವರು ಮಾಡಬಹುದು. ಕೊನೆಪಕ್ಷ ಸ್ಪೆಷಲ್ ಬಸ್‌ಗಳನ್ನಾದರೂ ಓಡಿಸುವ ವ್ಯವಸ್ಥೆಯನ್ನು ತಾವು ಮಾಡದಿದ್ದರೆ ಆಗಬೇಕಾದ ಮದುವೆಗಳನ್ನು ತಾಪೆ ತಪ್ಪಿಸಿದಂತಾಗುತ್ತದೆ. ಆ ಶಾಪಕ್ಕೆ ತಾವು ಗುರಿಯಾಗಬಾರದು. ದಯವಿಟ್ಟು ತಮ್ಮನ್ನು ಪ್ರಾರ್ಥನೆ ಮಾಡಿಕೆ ಳ್ಳುವುದೇನೆಂದರೆ ಬೆಂಗಳೂರಿನಿಂದ ಗ್ರಾಮಾಂತರ ಪ್ರದೇಶಗಳಿಗೆ ಹೋಗತಕ್ಕಂಥ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತೇನೆ, ಗ್ರಾಮಾಂತರ ಪ್ರದೇಶಗಳಿಗೆ ಹೋಗತಕ್ಕಂಥ ಬಸ್‌ಗಳ ದರ ಕಡಿಮೆ ಇರುತ್ತದೆ. ಆದರೆ ಬೆಂಗಳೂರು ನಗರದ ಬಸ್‌ಗಳ ದರ ಹೆಚ್ಚಿಗೆ ಮಾಡಿರುತ್ತೀರಿ. ತಮಗೆ ಹೇಳಬೇಕಾದರೆ ಇಡೀ ಭಾರತದಲ್ಲಿ ಮದ್ರಾಸ್ ರಾಜ್ಯದಲ್ಲಿ ಈ ರಸ್ತೆ ಸಾರಿಗೆ ಸಂಸ್ಥೆ ಲಾಭದಾಯಕವಾಗಿ ಕೆಲಸ ಮಾಡುತ್ತಿದೆ. ಇನ್ನು ಬೇರೆ ಯಾವ ರಾಜ್ಯಗಳಲ್ಲೂ ಲಾಭದಾಯಕವಾಗಿ ಕೆಲಸ ಮಾಡುತ್ತಿಲ್ಲ. ಮದ್ರಾಸ್‌ನಲ್ಲಿ ಲಾಭದಾಯಕವಾಗಿ ಕೆಲಸ ಮಾಡುತ್ತಿರಬೇಕಾದರೆ ನಮ್ಮಲ್ಲಿ ಏಕೆ ಈ ರೀತಿ ನಷ್ಟವಾಗುತ್ತಿದೆ ? ಇದರ ಬಗ್ಗೆ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ತರಬೇತಿಯನ್ನು ಕೊಡಿಸಬೇಕು. ಆದ್ದರಿಂದ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ಇದು ಬಹಳ ತುರ್ತು ಸ್ಥಿತಿ ಇರುವುದರಿಂದ ಕೂಡಲೇ ಇದರ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಆರ್. ಗುಂಡೂರಾವ್ (ಸಾರಿಗೆ ಶಾಖೆಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರಾದ ಶ್ರೀಮಾನ್ ಇಬ್ರಾಹಿಂರವರು ಏನು ಹೇಳಿದ್ದಾರೆ, ಅದನ್ನು ಉತ್ಪ್ರೇಕ್ಷೆಯಿಂದ ಹೇಳಿದ್ದಾರೆ. ಅಥವಾ ನಿಜಸ್ಥಿತಿಯನ್ನು ಇಲ್ಲಿ ಯೇಳುತ್ತಿಲ್ಲ ಮುಚ್ಚುಮರೆ ಮಾಡುತ್ತಿಲ್ಲ; ಅವರು ಹೇಳಿರುವುದರಲ್ಲಿ ಬಹುಪಾಲು ಸತ್ಯ ಇದೆ. ಅವರೇ ಹೇಳಿದ ಹಾಗೆ ಯಾವ ರೀತಿ ಜನಸಂಖ್ಯೆ ಏರುತ್ತಿದೆಯೋ ಅದಕ್ಕನುಗುಣವಾಗಿ ಬಸ್ಸುಗಳ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕಾಗಿಲ್ಲ. ಇದಕ್ಕೆ ಕಾರಣವೇನೆಂದರೆ ಸಾಕಷ್ಟು ಹಣದ ಸಹಾಯವನ್ನು ಕಾರ್ಪೊರೇಷನ್‌ಗೆ ಕೊಡದಿರುವುದು, ಎಂಬುದಾಗಿ ನನ್ನ ಇಲಾಖೆಯ ಬೇಡಿಕೆಗೆ ಉತ್ತರವನ್ನು ಕೊಟ್ಟಂತಹ ಸಂದರ್ಭದಲ್ಲೂ ಸ್ಪಷ್ಟವಾಗಿ ಹೇಳಿದ್ದೇನೆ. ಇಲ್ಲೂ ಕೂಡ ಅದನ್ನೇ ಹೇಳುವುದಕ್ಕೆ ಇಷ್ಟಪಡುತ್ತೇನೆ ಆವರೇ ಹೇಳಿದ ಹಾಗೆ ಇಲ್ಲಿ ಬಸ್ಸುಗಳಲ್ಲಿ ಪ್ರಯಾಣ ಮಾಡುವಂತಹ ಸಂಖ್ಯೆ ಜಾಸ್ತಿಯಾಗಿದೆ. ಮತ್ತು ಬಾಗಿಲುಗಳ ಬಸ್ ಸೌಕರ್ಯ ಬಹಳ ಕಡಿಮೆ ಇರುವುದರಿಂದ ಎಲ್ಲದಕ್ಕೂ ಬಡ ಜನತೆ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನೇ ಅವಲಂಬಿಸಿದ್ದಾರೆ. ಆದು ಕಾರ್ಪೊರೇಷನ್‌ನ ಗಮನಕ್ಕೂ ಬಂದಿದೆ. ಹಾಗೂ ಸರ್ಕಾರದ ಗಮನಕ್ಕೂ ಬಂದಿದೆ. ಅದಕ್ಕೆ ಒಂದು ಕಾರಣವೇನೆಂದರೆ ಇರತಕ್ಕಂತಹ ಬಸ್ಸುಗಳು ಬಹಳ ಹಳೆಯದಾಗಿರುವುದು. ಮತ್ತೊಂದು ಸಾಕಷ್ಟು ಬಸ್ಸುಗಳನ್ನು ಕಾರ್ಪೊರೇಷನ್ ತೆಗೆದುಕೊಂಡು ಬಸ್ಸುಗಳನ್ನು ಓಡಿಸಬೇಕು. ಮತ್ತು ಗ್ರಾಮಾಂತರ ಪ್ರದೇಶಗಳಲ್ಲೂ ಸಹ ಸರಿಯಾದ ಸಂಖ್ಯೆಯಲ್ಲಿ ಬಸ್ಸುಗಳನ್ನು ಹಾಕುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದನ್ನು ಬಗೆಹರಿಸಬೇಕಾದರೆ ಕೆಲವು ರಸ್ತೆಗಳನ್ನು ಖಾಸಗಿಯವರಿಗೆ ಪರ್ಮಿಟ್ ಕೊಡಬೇಕೇ, ಬೇಡವೇ ಎಂಬುದು ಸರ್ಕಾರದ ತೀವ್ರ ಪರಿಶೀಲನೆಯ ಲ್ಲಿದೆ. ಹಾಗೂ ಕಾರ್ಪೊರೇಷನ್ನಿನ ಪರಿಶೀಲನೆಯಲ್ಲೂ ಇದೆ. ಮತ್ತೆ ನಮಗೆ ಸಾಕಷ್ಟು ರೀತಿಯಲ್ಲಿ ಪರಿಹಾರಗಳು ಸಿಕ್ಕುತ್ತಿಲ್ಲ. ಅಂತಹ ಒಂದು ದೊಡ್ಡ ಸಮಸ್ಯೆ ನಮ್ಮ ಮುಂದಿದೆ. ಆದರೆ ತಮಿಳುನಾಡು ಸ್ವಲ್ಪ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ನಾನೂ ಒಪ್ಪಿಕೊಂಡಿದ್ದೇನೆ. ಈಗತಾನೇ ಕಳೆದ ೩-೪ ದಿವಸಗಳ ಹಿಂದೆ ದಕ್ಷಿಣ ರಾಜ್ಯದ ಸಾರಿಗೆ ಮಂತ್ರಿಗಳ ಸಮ್ಮೇಳನ ಉದಕಮಂಡಲದಲ್ಲಿ ನಡೆಯಿತು. ಆ ಸಮ್ಮೇಳನದಲ್ಲಿ ಆಂಧ್ರ, ಕೇರಳ,

ತಮಿಳುನಾಡು, ಮಹಾರಾಷ್ಟ್ರ ಹಾಗೂ ಕರ್ನಾಟಕದ ಸಾರಿಗೆ ಮಂತ್ರಿಗಳು ಭಾಗವಹಿಸಿದ್ದರು. ಎಲ್ಲ ರಾಜ್ಯಗಳ ಪರಿಸ್ಥಿತಿಯನ್ನು ನೋಡಿದಾಗ ತಮಿಳುನಾಡು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬುದಾಗಿ ತಿಳಿಯಿತು. ಆದರಲ್ಲಿ ನಾನಾಕಾರಣಗಳು ಇವೆ. ೨ ದಿವಸ ಸಮ್ಮೇಳನದಲ್ಲಿ ರಸ್ತೆ ಸಾರಿಗೆ ಸಂಸ್ಥೆ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದರ ಬಗ್ಗೆ ಚರ್ಚೆ ಮಾಡಿದೆವು. ಆ ರೀತಿ ಚರ್ಚೆ ಮಾಡಿದ್ದರಲ್ಲಿ ಎರಡು ಅಂಶಗಳು ತಿಳಿಯಿತು. ಒಂದು ಅವರು ಸಾರಿಗೆ ಸಂಸ್ಥೆಯನ್ನು ಕಂಪನಿ ರಿಜಿಸ್ಟ್ರರ್ ಆಕ್ಟ್ ಕೆಳಗೆ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಇದರಿಂದ ಸಾಕಷ್ಟು ಹಣವನ್ನು ಸಾಲದ ರೂಪದಲ್ಲಿ ಆದರಲ್ಲೂ ಕಡಿಮೆ ಬಡ್ಡಿ ದರದಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಅದಕ್ಕೆ ಸರ್ಕಾರ ಗ್ಯಾರಂಟಿ ನಿಂತುಕೊಳ್ಳುತ್ತದೆ. ಈ ರೀತಿ ಅವರು ಮಾಡಿಕೊಂಡಿರುವುದರಿಂದ ಇವತ್ತು ಅವರಿಗೆ ಹೊಸ ಬಸ್ಸುಗಳು ಬೇಕಾದಷ್ಟು ಬಂದಿವೆ. ನಮ್ಮಲ್ಲಿ ನಾನು ಮೊದಲೇ ಹೇಳಿದ ಹಾಗೆ ಬಸ್ಸುಗಳ ಅವಶ್ಯಕತೆ ಬೇಕಾದಷ್ಟು ಇದೆ. ಬಸ್ಸುಗಳು ಬಂದು ಬಿಟ್ಟರೆ ಎಲ್ಲಾ ತೊಂದರೆ ತಾನೇ ತಾನಾಗಿ ಹೋಗಿಬಿಡುತ್ತವೆ. ನಮ್ಮಲ್ಲಿರತಕ್ಕಂತಹವು ಎಲ್ಲ ಹಳೇ ಬಸ್ಸುಗಳೇ. ಅವುಗಳು ೭ ಲಕ್ಷ ಕಿ.ಮಿ. ಹಾಗೂ ೯ ಲಕ್ಷ ಕಿ.ಮಿ. ರವರೆಗೆ ಓಡಿರತಕ್ಕಂತಹ ಬಸ್ಸುಗಳು ಇವೆ. ಆ ಬಸ್ಸುಗಳನ್ನೇ ಓಡಿಸಿ ಎಂದರೆ ಸರಿಯಾಗಿ ಓಡಿಸುವುದಕ್ಕೆ ಸಾಧ್ಯವಿಲ್ಲ. ತಾಂತ್ರಿಕ ವಿಭಾಗದವರಿಗೆ ಅವುಗಳನ್ನು ರಿಪೇರಿ ಮಾಡಿ ಎಂದರೆ ಅವರು ಇವುಗಳನ್ನು ಎಷ್ಟೋ ಸಾರಿ ರಿಪೇರಿ ಮಾಡಿದ್ದೇವೆ,ಆದರೂ ಉಪಯೋಗಕ್ಕೆ ಬರುವುದಿಲ್ಲ. ಕಾರಣ ಹಳೆಯವಾಗಿವೆ ಎಂಬುದಾಗಿ ಹೇಳುತ್ತಾರೆ. ಮತ್ತೆ ನಮ್ಮಲ್ಲಿರತಕ್ಕಂತಹ ಮುಖ್ಯವಾದ ಎರಡು ಟಾಟಾ ಹಾಗೂ ಲೈಲ್ಯಾಂಡ್ ಕಂಪನಿಗಳು ಬಜಾರಿಗೆ ಸಾಕಷ್ಟು ಸಂಖ್ಯೆಯಲ್ಲಿ ಚಾಸಿಗಳನ್ನು ಸಪ್ಲೈ ಮಾಡುತ್ತಿಲ್ಲ. ಮತ್ತೆ ಫಾರ್ಗೋ, ಹಾಗೂ ಬೆಡ್‌ಫೋರ್ಡ್ ಕಂಪನಿಯ ಚಾಸಿಗಳನ್ನು ತೆಗೆದುಕೊಳ್ಳೋಣವೆಂದರೆ ನಮ್ಮ ಚೀಫ್ ಮ್ಯೆಕಾನಿಕಲ್ ಇಂಜಿನಿಯರ್‌ರವರು ಇವು ನಮಗೆ ಸರಿಹೋಗುವುದಿಲ್ಲ ಎಂಬುದಾಗಿ ಹೇಳುತ್ತಾರೆ. ೮೦ ವರ್ಷದ ಮುದುಕಿಯನ್ನು ೧೮ ವರ್ಷದ ಹುಡುಗ ಮದುವೆ ಮಾಡಿಕೊಳ್ಳತಕ್ಕಂತಹ ಪರಿಸ್ಥಿತಿಯನ್ನು ನಾವು ತಲುಪಿದ್ದೇವೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಸರ್ಕಾರದ ಉದ್ದೇಶವೇನೆಂದರೆ ನಾವು ಮೊದಲೇ ಹೇಳಿದ ಹಾಗೆ ೧ ಸಾವಿರ ಬಸ್ಸುಗಳು ಬೇಕೆಂದು ಆರ್ಡರನ್ನು ಪ್ಲೇಸ್ ಮಾಡಿದ್ದೇವೆ. ಅವು ಬಂದರೂ ಸಹ ಅವುಗಳು ಸಾಲದು. ಸುಮಾರು ೨ ಸಾವಿರ ಬಸ್ಸುಗಳು ಒಂದೇ ಸಾರಿ ನಮಗೆ ಸಿಕ್ಕಿದರೆ ಸ್ವಲ್ಪ ಮಟ್ಟಿಗೆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಕೂಡಲೇ ಎಲ್ಲವನ್ನೂ ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳೂ ಸಹ ಖಾಸಗಿಯವರಿಗೆ ಕೆಲವು ಗ್ರಾಮಾಂತರ ಪ್ರದೇಶ ರಸ್ತೆಗಳು ಏಕೆ ಪರ್ಮಿಷನ್ ಕೊಡಬಾರದೆಂಬ ಆಲೋಚನೆಯಲ್ಲಿದ್ದಾರೆ. ಆದರ ಬಗ್ಗೆ ನಾವು ಇನ್ನೂ ಅಂತಿಮ ತೀರ್ಮಾನ ಕೈಗೊಂಡಿಲ್ಲ. ಇದು ಬಹಳ ಚರ್ಚಾಸ್ಪದವಾಗಿದೆ. ಈ ನೀತಿಯ ಬಗ್ಗೆ ಅನೇಕ ಜನರು ವಿರೋಧವನ್ನು ವ್ಯಕ್ತ ಮಾಡಿದ್ದಾರೆ. ಕೆಲವರು ಮಾಡಿದರೆ ಒಳ್ಳೆಯದು ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನಮ್ಮ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಮಾಡಿದಂತಹ ಕೆಲವು ಮಾನ್ಯ ಸದಸ್ಯರು ರಾಷ್ಟ್ರೀಕರಣ ಮಾಡಿದ್ದು ಒಳ್ಳೆಯದು ಇದನ್ನು ಹೀಗೆ ಮುಂದುವರಿಸಿಕೊಂಡು ಹೋಗಿ ಎಂಬುದಾಗಿ ಕೆಲವು ಮಾನ್ಯ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ. ಕೆಲವರು ಇದರಿಂದ ಬಹಳ ತೊಂದರೆಯಾಗಿದೆ, ಆದ್ದರಿಂದ ರಾಜ್ಯದಲ್ಲಿ ಕೆಲವು ಭಾಗಗಳನ್ನಾದರೂ ಖಾಸಗಿಯವರಿಗೆ ಕೊಡಬೇಕೆಂದು ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳೆಲ್ಲವೂ ಸರ್ಕಾರದ ತೀವ್ರ ಪರಿಶೀಲನೆಯಲ್ಲಿವೆ. ಈ ರಾಜ್ಯದಲ್ಲಿ ಏನು ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿದೆ ಆ ತೊಂದರೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತದೆ. ಇದಕ್ಕೋಸ್ಕರ ಒಂದು ಸಮಿತಿಯನ್ನು ಮಾಡಿದ್ದೇವೆ. ಅದರಲ್ಲಿ ನಾನು, ಹಣಕಾಸಿನ ಸಚಿವರು, ಹಾಗೂ ಮುಖ್ಯಮಂತ್ರಿಗಳು ಇದ್ದೇವೆ. ಈ ದೊಡ್ಡ ಸಮಸ್ಯೆ ಏನಿದೆ ಇದನ್ನು ಪರಿಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದು ಒಂದು ಬರ್ನಿಂಗ್ ಪ್ರಾಬ್ಲಂ ಇದ್ದಂತೆ ಇದೆ. ನಮ್ಮ ರಾಜ್ಯದಲ್ಲಿರುವಂತಹ ಸಾರ್ವಜನಿಕರೆಲ್ಲರೂ ಬಸ್‌ನ್ನೇ ಆಪಲಂಬಿಸಿದ್ದಾರೆ. ನಮ್ಮ ರೈಲಿನ ಸೌಕರ್ಯ ಬಹಳ ಕಡಿಮೆ, ಹಾಗೂ ಖಾಸಗಿಯವರ ಬಸ್ ಸೌಕರ್ಯವೂ ಕೂಡ ಬಹಳ ಕಡಿಮೆ ಇರುವುದರಿಂದ ಎಲ್ಲರೂ ಈ ಬಸ್‌ನಲ್ಲೇ ಹೋಗಬೇಕು, ಸಿಟಿ ಬಸ್‌ಗಳಲ್ಲೂ ಆಷ್ಟೆ, ಗ್ರಾಮಾಂತರ ಪ್ರದೇಶಗಳ ಬಸ್‌ಗಳಲ್ಲೂ ಆಷ್ಟೇ. ಎಲ್ಲರೂ ಈ ಬಸ್‌ಗಳನ್ನೇ ಅವಲಂಬಿಸಿದ್ದಾರೆ. ಈ ಎಲ್ಲ ತೀವ್ರವಾದ ಪರಿಸ್ಥಿತಿಯನ್ನು ಆಲೋಚನೆಗೆ ತೆಗೆದುಕೊಂಡು ಪರಿಹಾರ ಕಂಡುಹಿಡಿಯಬೇಕು. ಜನರಿಗೆ ಅನುಕೂಲ ಮಾಡಿಕೊಡುವುದಕ್ಕೆ ಸರ್ಕಾರದವರು ತೀವ್ರವಾಗಿ ಪ್ರಯತ್ನವನ್ನು ಪಹಿಸುತ್ತಿದ್ದಾರೆ. ಮತ್ತು ಇದರ ಬಗ್ಗೆ ಕಾರ್ಪೊರೇಷನ್ ಸಹ ಸಾಕಷ್ಟು ಕ್ರಮ

ಕೈಗೊಳ್ಳುತ್ತವೆ. ಮತ್ತೆ ಮಾನ್ಯ ಇಬ್ರಾಹಿಂರವರು ಹೇಳಿದಹಾಗೆ ನಾನು ನೋಡುತ್ತಿರುತ್ತೇನೆ. ಜನರು ಬಸ್ಸಿಗಾಗಿ ಕಾಯುತ್ತಿರುತ್ತಾರೆ, ಆಗ ನಷ್ಟ ಕಾರಿನಲ್ಲಿ ಹೋಗುತ್ತಿರಬೇಕಾದರೆ ಅವರನ್ನು ನೋಡಿ ಬೇಜಾರಾಗುತ್ತದೆ.

ಮತ್ತೆ ನಗರ ಸಾರಿಗೆ ವಿಚಾರದಲ್ಲಿ ಹೇಳುವುದಾದರೆ ಇಡೀ ಭಾರತದಲ್ಲಿ ಮದ್ರಾಸ್ ರಾಜ್ಯದಲ್ಲಿ ಈ ವರ್ಷ ಅವರಿಗೆ ನಗರದಲ್ಲೂ ಸ್ವಲ್ಪ ಲಾಭ ಬಂದಿದೆ ಅದಕ್ಕೆ ಸಾಕಷ್ಟು ಕಾರಣಗಳಿವೆ. ಒಂದೇಒಂದು ವಿಶೇಷವೆಂದರೆ, ಬಸ್ಸಿನ ಕಂಡಕ್ಟರ್‌ಗಳಾದ ಕೃಷ್ಣಗಳನ್ನು ಅಲ್ಲಿ ಕೆಲಸ ಮಾಡುತ್ತಿರತಕ್ಕಂತಹ ಕೆಲಸಗಾರರ ಮೇಲೆ ತೆಗೆದುಕೊಳ್ಳುತ್ತಾರೆ ಮತ್ತೆ ಅವರು ಸ್ಟ್ರೈಕ್ ಮಾಡುವ ಹಾಗೆ ಇಲ್ಲ. ಅವರು ಮಸ್ಸಿನ್ಯಿಯಲ್ ಸರ್ವೀಸ್ ಆಕ್ಟ್ ಏಬಲ್ ಶಾಸನವನ್ನು ಮಾಡಿಕೊಂಡಿದ್ದಾರೆ. ಮತ್ತೆ ಅಲ್ಲಿಯ ಕೆಲಸಗಾರರಿಗೆ ಹೊಸ ರೀತಿಯ ಶಾಲಾಭಿವೃದ್ಧಿಯನ್ನು ಕೊಟ್ಟಿದ್ದಾರೆ. ಆ ರೀತಿ ಕಾರ್ಯಕ್ರಮವನ್ನು ಹಾಕಿಕೊಂಡು ನಾವೂ ಮಾಡಬೇಕಾಗಿದೆ. ಇದು ಅನೇಕ ವರ್ಷಗಳ ಹಿಂದೆಯೇ ನಾವು ಮಾಡಬೇಕಾಗಿದ್ದಂತಹ ಕೆಲಸ. ಇಂತಹಕ್ಕಂತಹ ತೊಂದರೆಗಳನ್ನು ಹೋಗಲಾಡಿಸುವುದಕ್ಕೆ ಸಾಕಷ್ಟು ಕ್ರಮವನ್ನು ಕಾರ್ಪೊರೇಷನ್ ತೆಗೆದುಕೊಳ್ಳುತ್ತದೆ. ಇದು ಬರೀ ಶಿವಮೊಗ್ಗಕ್ಕೆ ಸೀಮಿತವಾಗಿರುವಂತಹ ಸಮಸ್ಯೆಯಲ್ಲ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತಹ ಸಮಸ್ಯೆಯಾಗಿದೆ. ಶಿವಮೊಗ್ಗದಲ್ಲಿ ಪೂರ್ತಿ ರಾಷ್ಟ್ರೀಕರಣವಾಗಿಲ್ಲ ಸ್ವಲ್ಪ ಮಟ್ಟಿಗೆ ಖಾಸಗಿಯವರ ಬಸ್ಸುಗಳೂ ಸಹ ಇವೆ. ಇದರ ಬಗ್ಗೆಯೂ ಕೂಡ ಆಲೋಚನೆ ಮಾಡಿ ಆದಷ್ಟು ಬೇಗ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ಸರ್ಕಾರ ಕೈಗೊಳ್ಳುತ್ತದೆಂದು ಆಶ್ವಾಸನೆ ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಸಿ. ಕೆ. ಇಬ್ರಾಹಿಂ.– ನಾನು ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಕಾರಣ ತಾವು ತಿಳಿದುಕೊಂಡಿದ್ದೀರಿ. ಇವತ್ತು ನಾವು ಹೇಳಿರುವಂತಹ ಸ್ಪಷ್ಟ ವಿಚಾರವನ್ನು ಅವರು ಸ್ವತಃ ಒಪ್ಪಿಕೊಂಡಿದ್ದಾರೆ ಧನ್ಯವಾದಗಳು. ಅವರು ಹೋದಸಲವೂ ಸಹ ಬೆಂಡಿಕೆಯ ಮೇಲೆ ಚರ್ಚೆಯಾದಾಗ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾತಿ ತೀರ್ಮಾನ ಕೈಗೊಳ್ಳುತ್ತೇವೆಂದು ಹೇಳಿದರು. ನಾನು ಕೇಳಿರತಕ್ಕಂತಹದು ತತ್ಕಾರ್ಯ ಕ್ರಮ. ಚರ್ಚೆ ಮಾಡಿ ವಿಚಾರ ಮಾಡುವುದರೊಳಗೆ ಆಷಾಢ ಮಾಸ ಬಂದುಬಿಟ್ಟರೆ ಆಮೇಲೆ ಇದು ಪ್ರಯೋಜನವಾಗುವುದಿಲ್ಲ. ನನ್ನ ಪ್ರಶ್ನೆ ಕೇವಲ ಶಿವಮೊಗ್ಗ ಜಿಲ್ಲೆಗೆ ಮಾತ್ರ ಸೀಮಿತವಾದದ್ದಲ್ಲ. ಇದು ಇಡೀ ರಾಜ್ಯದಲ್ಲಿರತಕ್ಕಂತಹ ಗ್ರಾಮಾಂತರ ಪ್ರದೇಶದ ಬಗ್ಗೆ. ಆಷಾಢ ಮಾಸ ಬರುವುದಕ್ಕಿಂತ ಮುಂಚಿತವಾಗಿ ಸಮಸ್ಯೆಗೆ ಯಾವುದಾದರೂ ಒಂದು ವ್ಯವಸ್ಥೆಯಾಗಬೇಕು. ಎರಡನೆಯದಾಗಿ ಈ ರಾಜ್ಯದಿಂದ ಬೇರೆ ರಾಜ್ಯಗಳಿಗೆ ಹೋಗತಕ್ಕಂತಹ ಬಸ್ಸುಗಳ ವಿಚಾರದಲ್ಲಿ ಹೇಳುವುದಾದರೆ, ಇದರಿಂದ ವ್ಯಾಪಾರಕ್ಕೆ ಬಹಳ ದೊಡ್ಡ ಲುಕ್ಷಾಸಾಗುತ್ತಿದೆ. ಮದ್ರಾಸ್‌ನಿಂದ ಬರತಕ್ಕಂತಹವರು, ಕೇರಳದಿಂದ ಬರತಕ್ಕಂಥವರು, ಆಂಧ್ರದಿಂದ ಬರತಕ್ಕಂತಹವರು.....

ಅಧ್ಯಕ್ಷರು. —ತಾವು ನಿರ್ದಿಷ್ಟವಾದ ವಿಷಯಕ್ಕೆ ಮಾತ್ರ ವಿವರಣೆ ಕೇಳಿ. ಭಾಷಣ ಮಾಡಬೇಡಿ.

ಶ್ರೀ ಸಿ.ಎಂ. ಇಬ್ರಾಹಿಂ –ಕೆ.ಎಸ್.ಆರ್.ಟಿ.ಸಿ. ಎಂದು ಒಂದೇ ನಿಮಿಷದಲ್ಲಿ ಹೇಳುವುದಕ್ಕಾಗುವುದಿಲ್ಲ. ರಾಜ್ಯದಿಂದ ಹೊರಗಡೆ ಸೋಗತಕ್ಕಂತಹ ಬಸ್ಸುಗಳ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೀರಾ ? ಎಷ್ಟು ದಿವಸಗಳಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಅಧ್ಯಕ್ಷರು —ನಾನು ನಿಮ್ಮ ನೋಟಿಸನ್ನು ನೋಡಿದ್ದೇನೆ. ತಾವು ಶಿವಮೊಗ್ಗ ಹಾಗೂ ಬೆಂಗಳೂರು ಬಗ್ಗೆ ಮಾತ್ರ ತಿಳಿಸಿದ್ದೀರಿ. ಆದ್ದರಿಂದ ಅಷ್ಟಕ್ಕೆ ಸೀಮಿತವಾದರೆ ಒಳ್ಳೆಯದು.

ಶ್ರೀ ಸಿ. ಕೆ. ಇಬ್ರಾಹಿಂ.—ಊಟ ಅಂದ ಮೇಲೆ ಹಪ್ಪಳ, ಉಪ್ಪಿನಕಾಯಿ, ಉಪ್ಪು, ಹುಳಿ ಎಲ್ಲವೂ ಇರಬೇಕಾಗುತ್ತದೆ. ಬರೀ ಅನ್ನಸಾರನ್ನು ಊಟ ಎಂಬುದಾಗಿ ಹೇಳುವುದಕ್ಕಾಗುತ್ತದೆಯೇ ? ಆದ್ದರಿಂದ ಇದರ ಬಗ್ಗೆ ಒಂದು ಸ್ಪಷ್ಟವಾದ ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಕೆ. ಎಸ್. ಮಹಾಬಲ ಪಾಟೀಲ್— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುವಾಗ ಈ ಬಗ್ಗೆ ಅವಶ್ಯಕತೆಇರುವ ಎಲ್ಲ ವಿಷಯಗಳನ್ನೂ ಸಹ ಒಪ್ಪಿಕೊಂಡಿದ್ದಾರೆ. ತಮಗೆ ಹೆಚ್ಚಿನ ಬೇಕಾದರೆ ನಾನು ಹೇಳುತ್ತೇನೆ ಬೆಂಗಳೂರಿನಲ್ಲಿ ಬಸ್ ಡಿಪೋ ಇದ್ದರೂ ಕೂಡ ಅಲ್ಲಿ ಕಂಡಕ್ಟರ್ ಸರಿಯಾಗಿ ಡ್ಯೂಟಿ ಮಾಡುವುದಿಲ್ಲ ಬೆಂಗಳೂರಿನ ಡಿಪೋ ಮ್ಯಾನೇಜರ್ ಪತ್ರಿಕೆ ಹೊಗಿ ಹೇಳಿದ್ದಾರೆ. ಅಂಗಡಿಗೆ ಮತ್ತು ಸಂತೆಗೆ ಇಲ್ಲಿ ಗ್ರಾಮಕ್ಕೆ ಹೋಗಿ ಆ ಕಂಡಕ್ಟರ್ಸ್ ಸ್ಟ್ರೈಕ್ ಮಾಡುತ್ತಿದ್ದಾರೆ ನನಗೆ ವೈಯಾಣಕ್ಕೆ ಬಸ್ ಇಲ್ಲ ಬಸ್ ಬಿಡಲಾಗದೆ ಎಂದು ಹೇಳಿದರೂ ಕೂಡ ಅಲ್ಲಿಯ ಮ್ಯಾನೇಜರ್ ಆ ಕಂಡಕ್ಟರ್ಸ್‌ನ ಯಾರೂ

ಬರುತ್ತಾ ಇಲ್ಲ ಎಂದು ಅವರಿಗೆ ಹೇಳಿದರು. ಇದಕ್ಕೆ ಕಾರಣ ಏನು ಎಂದು ಕೇಳಿದಾಗ ಅವರು ಟ್ರಾನ್ಸ್ಫರ್ ವಿಚಾರದಲ್ಲಿ ಈ ರೀತಿ ತೊಂದರೆ ಇದೆ ಎಂದು ಹೇಳಿದರು. ಏನಂತ ಅಂದರೆ ರಾಯಚೂರು, ಕೊಪ್ಪಲ್ ಮತ್ತು ಲಿಂಗಸುಗೂರು ಡಿವಿಷನ್ ಬಿಟ್ಟು ನಮ್ಮನ್ನು ಬೇರೆ ಕಡೆ ಎಲ್ಲೂ ಟ್ರಾನ್ಸ್ಫರ್ ಮಾಡುತ್ತಾ ಇಲ್ಲ ಎಂದು ಹೇಳಿದರು. ಇದಕ್ಕೆ ತಾವು ಏನಾದರೂ ಒಂದು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಪಿ. ರಾಂದೇವ್—ಸ್ವಾಮಿ, ಈ ಕೆ.ಎಸ್.ಆರ್.ಟಿ.ಸಿ.ಯ ದರದ ಬಗ್ಗೆ ಒಂದು ಸಮಿತಿ ಮಾಡಿ ಆ ಪ್ರಕಾರ ೧೨½ ಪರ್ಸೆಂಟ್ ಜಾಸ್ತಿ ಇರಬೇಕೆಂದು ಗೊತ್ತುಮಾಡಿ, ಈ ಸಭೆಯ ಮೆಚ್ಚುಗೆ ಪಡೆದು ಮಾಡಿದಿರಿ. ಆದರೆ ಇದೇ ಒಂದು ನೀತಿಯನ್ನು ಬಿ.ಟಿ.ಎಸ್. ಬಗ್ಗೆ ತಾವು ಅನುಸರಿಸಲಿಲ್ಲವಾ. ಈಗ ನೀವು ಬಿ.ಟಿ.ಎಸ್. ದರವನ್ನು ಜಾಸ್ತಿ ಮಾಡಿರುವುದನ್ನು ನೋಡಿದರೆ ಸುಮಾರು ೪೦ ಪರ್ಸೆಂಟಿನಿಂದ ೬೦ ಪರ್ಸೆಂಟ್‌ನವರಿಗೆ ಜಾಸ್ತಿಯಾಗಿದೆ. ಇದರಿಂದ ಅನೇಕ ಜನರಿಗೆ ತೊಂದರೆಯಾಗಿದೆ. ಆದುದರಿಂದ ಈಗ ಕೆ.ಎಸ್.ಆರ್.ಟಿ.ಸಿ. ಬಗ್ಗೆ ಏನು ಒಂದು ನೀತಿಯನ್ನು ಅನುಸರಿಸಿದಿರೋ ಅದೇ ನೀತಿಯನ್ನು ಇದಕ್ಕೂ ಅನುಸರಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಆರ್. ಗುಂಡೂರಾವ್—ಶ್ರೀಮಾನ್ ಇಬ್ರಾಹಿಂರವರು ಕೆಲವು ಕ್ಲಾರಿಫಿಕೇಷನ್ ಕೇಳಿದ್ದಾರೆ. ಏನಂತ ಅಂದರೆ ಇದರ ಬಗ್ಗೆ ಬಹಳ ತುರ್ತಾಗಿ ಪರಿಹಾರ ಕೈಗೊಳ್ಳುತ್ತೀರಾ ಎಂದು. ಈ ತುರ್ತು ಪರಿಹಾರವನ್ನು ಕೈಗೊಳ್ಳುವುದಕ್ಕೆ, ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಇದೇನೂ ವ್ಯಾಪಾರವಲ್ಲಾ. ಇದರಲ್ಲಿ ಏನು ವಿಚಾರ ಇದೆ ಎಂದರೆ ದುಡ್ಡು ಕೊಟ್ಟರೇನೇ ಬಸ್ಸು ಬರುವುದು ಬಸ್ಸನ್ನು ತೆಗೆದುಕೊಳ್ಳಬೇಕಾದರೆ ದುಡ್ಡು ಬೇಕಲೇಬೇಕು. ಬೇರೆ ಪ್ರಶ್ನೆಯೇ ಇದರಲ್ಲಿ ಬರುವುದಿಲ್ಲಾ. ಇದನ್ನೂ ಇನ್ನೊಬ್ಬರು ಮಾಡಿದರೂ ಸಹ ಅವರಿಗೂ ಕೂಡ ಬಸ್ ಬೇಕಲೇಬೇಕು. ತಮಗೆ ಹೇಳಬೇಕಾದರೆ ಈವೊತ್ತು ಬಸ್ ಸಿಕ್ಕುವುದಿಲ್ಲಾ. ಈವೊತ್ತಿನ ದಿವಸ ಒಂದು ಬಸ್ಸನ್ನು ತೆಗೆದುಕೊಳ್ಳಬೇಕಾದರೆ ಸಾಧಾರಣ ಬಸ್ಸನ್ನು ತೆಗೆದುಕೊಳ್ಳಬೇಕಾದರೂ ಕೂಡ ೨ ಲಕ್ಷ ೨೦ ಸಾವಿರ ರೂಪಾಯಿ ಬೇಕಾಗುತ್ತದೆ. ಇನ್ನು ಇಂಟರ್‌ಸ್ಟೇಟ್‌ಗೆ ಆಗಲಿ ಯಾವುದಕ್ಕೆ ಆಗಲಿ ಲಕ್ಸುರಿ ಬಸ್ಸನ್ನು ಕೊಂಡುಕೊಳ್ಳಬೇಕಾದರೆ ಇನ್ನೂ ಜಾಸ್ತಿ ದುಡ್ಡು ಬೇಕಾಗುತ್ತದೆ. ಆದುದರಿಂದ ಈ ಬಗ್ಗೆ ಖಾಸಗಿಯವರೇನಾದರೂ ಮಾಡುವುದಕ್ಕೆ ಸಾಧ್ಯವೇ ಅನ್ನುವುದನ್ನು ಕೂಡ ಪರಿಶೀಲನೆ ಮಾಡುತ್ತಿದ್ದೇವೆ. ಸರ್ಕಾರದಿಂದ ಕೆಲವು ಬಸ್ಸುಗಳು ಓಡಿಸುವುದಲ್ಲದೆ ಖಾಸಗಿಯವರು ಏನಾದರೂ ಈ ಬಸ್ ಓಡಿಸಲಿಕ್ಕೆ ಸಾಧ್ಯವಾದರೆ ಅದನ್ನು ಯಾವ ರೀತಿ ಮಾಡೋಣ ಎಂದು ಪರಿಶೀಲನೆ ಮಾಡುತ್ತಿದ್ದೇವೆ. ಈ ಬಗ್ಗೆ ನಾನು ಮೊದಲೇ ಇಲ್ಲಿ ಹೇಳಿದ್ದೇನೆ ಅದೇನೆ ಇರಲಿ ಅದಷ್ಟು ಬೇಗ ಈ ಬಗ್ಗೆ ಇನ್ನು ಒಂದು ವಾರದಲ್ಲೋ ಅಥವಾ ೧೫ ದಿವಸದಲ್ಲೋ ಒಂದು ತೀರ್ಮಾನ ಕೈಗೊಳ್ಳುತ್ತೇವೆ. ಇನ್ನು ಬಾಕಿ ವಿಷಯಗಳ ಬಗ್ಗೆ ಹೇಳಬೇಕಾದರೆ ನಮ್ಮ ನಿಮ್ಮ ಅಭಿಪ್ರಾಯ ಒಂದೇ. ಬಸ್ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ಪ್ರಯಾಣಿಕರಿಗೆ ತೊಂದರೆಯಾಗದೇ ಇರುವ ಹಾಗೆ ಅನುಕೂಲಮಾಡಿಕೊಡಬೇಕು ಎಂದು ಹೇಳಿದ್ದೀರಿ. ಈ ಬಗ್ಗೆ ನಾನು ಮೊದಲೇ ವಿವರಣೆ ಕೊಟ್ಟಿದ್ದೇನೆ.

ಇನ್ನು ಬಸವರಾಜ ಪಾಟೀಲ್‌ರವರು ಕಂಡಕ್ಟರ್ ತಮ್ಮ ಡಿವಿಷನ್‌ನಲ್ಲಿ ಸರಿಯಾಗಿ ಕೇಸು ಮಾಡುತ್ತಾ ಇಲ್ಲಾ ಎಂದು ಹೇಳಿದರು. ಅದನ್ನು ಅಲ್ಲಿ ಅಡ್ಮಿನಿಸ್ಟ್ರೇಟರ್ ನೋಡಿಕೊಳ್ಳುತ್ತಾರೆ. ಮತ್ತು ಅಲ್ಲಿ ಡಿವಿಷನಲ್ ಮ್ಯಾನೇಜರ್ ಇರುತ್ತಾರೆ. ಅವರು ಅದನ್ನೆಲ್ಲಾ ನೋಡಿಕೊಳ್ಳುತ್ತಾರೆ. ಅಲ್ಲಿ ಯಾರಾದರೂ ಕೂಡ ತಪ್ಪು ಮಾಡಿದ್ದರೆ ಕಾನೂನು ಪ್ರಕಾರ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳುತ್ತೇನೆ.

ಇನ್ನು ಶ್ರೀಮಾನ್ ಪಿ. ರಾಂದೇವ್‌ರವರು ಬಿ.ಟಿ.ಎಸ್. ಬಗ್ಗೆ ಹೇಳಿದರು. ತಮಗೆಲ್ಲಾ ಗೊತ್ತಿರುವ ಹಾಗೆ ಈವೊತ್ತು ಈ ಕೆ.ಎಸ್.ಆರ್.ಟಿ.ಸಿ. ದರದ ಬಗ್ಗೆ ಒಂದು ಕಮಿಟಿ ಮಾಡಿ ಅದರಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳೂ ಇದ್ದರು, ಆ ಕಮಿಟಿಯ ಒಂದು ತೀರ್ಮಾನದಂತೆ ನಾವೆಲ್ಲಾ ಒಪ್ಪಿಕೊಂಡಿದ್ದೇವೆ. ಅದರ ಪ್ರಕಾರ ಬಿ.ಟಿ.ಎಸ್. ದರದ ಬಗ್ಗೆಯೂ ಯೋಚನೆ ಮಾಡುತ್ತೀರಾ ಎಂದು ಅವರು ಕೇಳಿದ್ದಾರೆ. ಆ ಬಗ್ಗೆ ನಾವು ಆಲೋಚನೆ ಮಾಡೋಣ ಎಂದು ಹೇಳಿದ್ದೇನೆ. ಈ ಪ್ರಶ್ನೆಗೆ ಸಂಬಂಧಪಡದೇ ಇದ್ದರೂ ಕೂಡ ಅವರು ಈ ಒಂದು ಪ್ರಶ್ನೆಯನ್ನು ಕೇಳಿದ್ದಾರೆ ಈ ಪ್ರಶ್ನೆ ಮಾನ್ಯ ಶ್ರೀ ಇಬ್ರಾಹಿಂ ಅವರಿಗೆ ಸಂಬಂಧಪಟ್ಟದಾದರೂ ಕೂಡ ಕೇಳಿದ್ದಾರೆ. ಆದರೂ ಸಹ ನಾನು ಶ್ರೀ ಪಿ. ರಾಂದೇವ್ ಅವರಿಗೆ ಹೇಳುವುದೇನೆಂದರೆ ಅದಷ್ಟು ಶೀಘ್ರದಲ್ಲೇ ಈ ಸದನ ಮುಂಗಿಯುವುದರೊಳಗೇ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ ಮತ್ತು ಆ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ಭೀಮಣ್ಣ ಎಸ್. ಖಂಡ್ರೆ - ನಾನು ಈ ವಿಷಯವನ್ನು ಬಹಳ ವಿಶಾದದಿಂದ ಹೇಳಬೇಕಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ನಿನ್ನೆ ತಾರೀಖಿನ...

MR. SPEAKER.—The Hon. Minister is not in the station. This will be posted for tomorrow.

Alleged assault on an electrician at the Bowring Hospital

SRI GOVIND P. VADEYARAJ (Kamlapur) —I have given a notice of adjournment motion regarding an incident that has taken place very rocently in Bowring Hospital. Probably, the House is aware that an young electrician when talked about Sri Sanjay Gandhi he was assaulted.

ಅಧ್ಯಕ್ಷರು—ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇದ್ದರೂ ಕೂಡ ಇದನ್ನು ತೆಗೆದುಕೊಳ್ಳಿ ಎಂದು ಹೇಳುತ್ತಿರಾ? ನಾಳೆಯ ಅಜೆಂಡಾದಲ್ಲಿ ಇದನ್ನು ತೆಗೆದುಕೊಳ್ಳುತ್ತೇನೆ ದಯವಿಟ್ಟು ಕುಳಿತುಕೊಳ್ಳಿ.

SRI GOVIND P. VADEYARAJ — Fascism and the people who are followers of fascism are raising their heads. That is important. Here a principle is involved. A Congress (I) M.LA. is involved here. The electrician was made to fall at the feet of that Congress (I) member. He was made to apologise before that M.L.A. and the Health Department authorities.

MR. SPEAKER—I have not permitted you to say anything. I have said that your matter will be converted into a calling attention notice and it will be taken up tomorrow. Now we will take up the vote on demands. The Hon. Minister for Justice and Social Welfare will move the demands.

Budget Estimates for 1979-80
Demands for grants
Demands Nos: 34 and 60

(Demands on Administration of Justice and Social Security and Welfare Excluding women and childrens welfare)

SRI L.G. HAVANUR—Sir, on the recommendation of the Governor, I beg to move:

> That a sum not exceeding Rs. 6,00,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 34 "Administration of Justice."
>
> That a sum not exceeding Rs. 29,82,10,000 inclusive of the sum granted 'on account' be granted to the Government